'ನೀನು ಸಿಹಿ ಸುದ್ದಿ ಕೊಟ್ಟ ಕೂಡಲೆ ಕೊಡಬೇಕೂ ಅಂತ ಇಟ್ಕೊಂಡಿದೀನಿ ಚಿನ್ನೂ... ಪ್ಲೀಸ್...'
ಅವಳಿಗೆ ತನ್ನ ಹೆಣ್ತನವೆಲ್ಲ ಹೆಪ್ಪುಗಟ್ಟಿ ಆ ಕ್ಷಣದಲ್ಲಿ ತಾನು ಹಿಮಗಲ್ಲಾಗಿಬಿಡಬಾರದೆ—ಎನ್ನಿಸಿತು.
'ಐ ಹ್ಯಾವ್ ಬೀನ್ ವೈಯ್ಟಿಂಗ್ ಫಾರ್ ದಟ್ ಗೋಲ್ಡನ್ ಮೊಮೆಂಟ್ ಚೀ!'
'ನಿನಗೆ ಯಾವತ್ತೂ ಆ ಬಂಗಾರದ ಕ್ಷಣ ಬರಲಿಕ್ಕಿಲ್ಲ ಬಿಡು.'
'ಅದು ಬಂದೇ ಬರಬೇಕು; ಬರುತ್ತೆ!'
ಅವಳ ತುಟಿಗಳು ಅದುರುತ್ತಿದ್ದವೇ ಹೊರತು ಮಾತು ಹೊರಡಲಿಲ್ಲ...
'ಅಮ್ಮ ತುಂಬಾ ಹಟ ಮಾಡ್ತಿದಾಳೆ; ಆಫೀಸ್‌ನಲ್ಲಿ ನನ್ನ ಎಲ್ರೂ ಒಂತರಾ ನೋಡ್ತಾರೆ.'
'ಅರೆ! ಅದಕ್ಕೆ ನಾನೇನಪ್ಪಾ ಮಾಡ್ಲಿ? ನೀನೇ ಒಂದು ಹೆತ್ತು ಕೊಡು...'
'ನೋಡು, ಇದು ತಮಾಷೆ ಮಾಡೋ ವಿಚಾರ ಅಲ್ಲ; ವಿ ಶುಡ್ ಹ್ಯಾವ್ ಅ ಚೈಲ್ಡ್ ನೌ; ನಂಗೆ ಈಗಲೇ ಮಗು ಬೇಕು. ನಾನು ಗಂಡಸು!'
ಅವಳು ತನ್ನ ಕೋಣೆಗೆ ಹೋಗಿ, ದಢಾರನೆ ಬಾಗಿಲು ಹಾಕಿಕೊಂಡಳು.
ಲ್ಯಾಪ್‌ಟಾಪ್ ತನ್ನಷ್ಟಕ್ಕೆ ತಾನು ಬುಸುಗುಡುತ್ತಲೇ ಇತ್ತು; ಸ್ವಲ್ಪ ಹೊತ್ತಿಗೆ, ಯಾರದೋ ಮೆಸೇಜ್ ಬಂದಿತು ಎಂದು ಬೆಳಗಿತು. (ಅವಳೆ! ಖಂಡಿತ ಅವಳದ್ದೆ! 'ಎನಿತಿಂಗ್ ಸ್ಪೆಷಲ್? ಮತ್ತೇನಾದ್ರೂ ಸಿಹಿ ಸುದ್ದಿ?')
ಅವಳು ಲ್ಯಾಪ್‌ಟಾಪನ್ನು ದುರುಗುಟ್ಟಿ ನೋಡುತ್ತಾ ಶಪಿಸಿದಳು: ದಿಸ್ ಟ್ರೈಬ್ ಮಸ್ಟ್ ಪೆರಿಷ್! ಈ ಕುಲ ಸರ್ವನಾಶವಾಗಿ ಹೋಗಲಿ!
ಬೆಳಗ್ಗೆ ಎದ್ದವಳೇ, ತನ್ನ ಕಬೋರ್ಡಿನ ಡ್ರಾವನ್ನು ಎಳೆದು ಎಂದೋ ತಂದಿಟ್ಟುಕೊಂಡಿದ್ದ ಪುಟ್ಟ ಪ್ಯಾಕೆಟನ್ನು ತೆರೆದಳು. ಪಟ್ಟಿಯ ಒಂದು ಬದಿಗೆ ಚಿಕ್ಕ ವೃತ್ತಾಕಾರದ ಗುಂಡಿ; ಇನ್ನೊಂದು ಬದಿಗೆ ಸ್ವಲ್ಪ ಉದ್ದನೆ ಪರದೆ. ಅವಳು, ಮೊದಲನೆಯ ಗುಂಡಿಯಲ್ಲಿ, ತನ್ನ ಮೂತ್ರದ ಮೂರು ಹನಿಯನ್ನು ಬೀಳಿಸಿದಳು; ಐದು ನಿಮಿಷ ಅದರ ಮುಂದೆ ಕಣ್ಣಲ್ಲಿ ಕಣ್ಣಿಟ್ಟು ಕಾದಳು... ಇನ್ನೊಂದು ಬದಿಯ ಚಿಕ್ಕ ಕಿಟಕಿಯಂತಿರುವಲ್ಲಿ, ದಟ್ಟ ಗುಲಾಬಿ ಬಣ್ಣದ ಎರಡು ಗೆರೆಗಳು ಮೂಡಿದವು!
ಅವಳ ಕಣ್ಣಿನ ಪರದೆಯ ಮುಂದೆ ಪುಟ್ಟ ಪುಟ್ಟ ಪಾಂಡಾಗಳು ಪುಟಿಯತೊಡಗಿದವು! ಒಂದೊಂದೆ ಅವಳ ಮೈಮೇಲೆ ಹತ್ತಿ ಇಳಿದು ಆಟವಾಡತೊಡಗಿದವು. ಅವಳಿಗೆ ಕಿಬ್ಬೊಟ್ಟೆಯಲ್ಲಿ ಅದೇನೊ ಮಿಳಿದಂತಾಗಿ ಕಚಗುಳಿಯನ್ನು ತಾಳಲಾರದೆ, ತನ್ನ ಗೆಳತಿಯ ಮೆಸೇಜನ್ನು ಓಪನ್ ಮಾಡಿ, ಉತ್ತರಿಸಿದಳು:
'ಖಂಡಿತಾ ಸ್ಪೆಷಲ್ ನ್ಯೂಸ್ ಇದೆ! ಆದರೆ ಅದು ನಿನಗೂ ಅಲ್ಲ; ನನ್ನ ಗಂಡನಿಗೂ ಅಲ್ಲ—ನನಗೆ ಮತ್ತು ನನ್ನ ಪುಟ್ಟನಿಗೆ ಅಷ್ಟೆ! ಈ ವಿಶ್ವ ಇನ್ನೆಂದೂ ನಮ್ಮಿಬ್ಬರದೇ! ಬೇರೆ ಯಾವ ಕ್ರಿಮಿಗೂ ಇಲ್ಲಿ ಯಾವತ್ತೂ ಪ್ರವೇಶವಿಲ್ಲ—ಪಾಲೂ ಇಲ್ಲ!'

'ಅಲಕ ತೀರ್ಥಹಳ್ಳಿ' ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುವ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪದ ಹೂಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. 'ಈ ಕಥೆಗಳ ಸಹವಾಸವೇ ಸಾಕು' ಮತ್ತು 'ನವಿಲೆಸರ' ಅವರ ಕಥಾಸಂಗ್ರಹಗಳು. ಅವರ ಕಾದಂಬರಿ 'ಮುಂದೆ ಬರುವುದು ಮಹಾನವಮಿ'. ನಾಟಕಗಳನ್ನು, ಕವಿತೆಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.